

ನುಡಿದಂತೆ ನಡೆಯುತ್ತಿದ್ದೇವೆ...

ಸಾಧನೆಯ ಮೂರು ವರ್ಷಗಳು

# ಮೂರು ವರ್ಷ! ಎಲ್ಲೆಲ್ಲೂ ಹರ್ಷ!

ಮೇ 13, ೨೦೧೩. ಕರ್ನಾಟಕದಲ್ಲಿ ಸಿದ್ದರಾಮಯ್ಯ ಅವರ ಸರ್ಕಾರ ಅಸ್ತಿತ್ವಕ್ಕೆ ಬಂದ ದಿನ. ಅಂದು ಸಮಾಜದ ಹರಿಕಾರ ಜಗಜ್ಯೋತಿ ಬಸವೇಶ್ವರರ ಜಯಂತಿ ಕೂಡಾ. ಬೆಂಗಳೂರಿನ ಶ್ರೀ ಕಂಠೀರವ ಹೊರಾಂಗಣ ಕ್ರೀಡಾಂಗಣದಲ್ಲಿ ಕಿಕ್ಕಿರಿದು ತುಂಬಿದ್ದ ಲಕ್ಷೋಪಲಕ್ಷ ಸಾರ್ವಜನಿಕರ, ವಿಶೇಷವಾಗಿ ಅಭಿಮಾನಿಗಳ ಹರ್ಷೋದ್ಗಾರಗಳ ನಡುವೆ ಸಿದ್ದರಾಮಯ್ಯ ಅವರು ರಾಜ್ಯದ ಮುಖ್ಯಮಂತ್ರಿಯಾಗಿ ಅಂದು ಪ್ರಮಾಣ ವಚನ ಸ್ವೀಕರಿಸಿದರು.

ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಅರ್ಧ ಗಂಟೆಯೊಳಗೇ ಸಿದ್ದರಾಮಯ್ಯನವರು ಅನ್ನಭಾಗ್ಯ, ಕ್ಷೀರಭಾಗ್ಯ, ವಸತಿಭಾಗ್ಯ, ಋಣ ಮುಕ್ತಿ ಭಾಗ್ಯ ಹಾಗೂ ಹಾಲು ಉತ್ಪಾದಕರಿಗೆ ಪ್ರತಿ ಲೀಟರ್ ಹಾಲಿಗೆ ನಾಲ್ಕು ರೂಪಾಯಿ ಪ್ರೋತ್ಸಾಹ ಧನ ನೀಡುವ ಯೋಜನೆಗಳನ್ನು ಅನುಷ್ಠಾನಗೊಳಿಸುವ ಮಹತ್ತರ ನಿರ್ಣಯಗಳನ್ನು ಘೋಷಿಸಿದರು.

## ಏನಿದು ಅನ್ನಭಾಗ್ಯ ?

ಬಡತನ ರೇಖೆಗಿಂತಲೂ ಕೆಳಗಿರುವ ಕುಟುಂಬಗಳಿಗೆ ಒಂದು ಕೆ ಜಿ ಗೆ ಒಂದು ರೂಪಾಯಿ ದರದಲ್ಲಿ ಒಂದು ಕುಟುಂಬಕ್ಕೆ ಗರಿಷ್ಠ ೩೦ ಕೆ ಜಿ ಅಕ್ಕಿ ವಿತರಿಸುವ ಮಹತ್ವದ ಯೋಜನೆಯೇ ಅನ್ನಭಾಗ್ಯ. ನಂತರದ ದಿನಗಳಲ್ಲಿ ಈ ಯೋಜನೆಯನ್ನು ಪ್ರಾದೇಶಿಕ ಬೇಡಿಕೆಗಳಿಗೆ ಅನುಗುಣವಾಗಿ ರಾಗಿ ಹಾಗೂ ಜೋಳ ವಿತರಿಸಲು ಅನುಕೂಲವಾಗುವಂತೆ ಮಾರ್ಪಡಿಸಲಾಯಿತು.

ಅತ್ಯಂತ ಮಹತ್ವಪೂರ್ಣ ಅನ್ನಭಾಗ್ಯ ಯೋಜನೆಯಲ್ಲಿ ರಾಜ್ಯದ ಒಂದು ಕೋಟಿ ಎಂಟು ಲಕ್ಷ ಕುಟುಂಬಗಳು ಆಹಾರಧಾನ್ಯ ಪಡೆಯುತ್ತಿವೆ. ಅಂದರೆ ನಾಲ್ಕು ಕೋಟಿಗಿಂತಲೂ ಹೆಚ್ಚು ಮಂದಿ ಈ ಯೋಜನೆಯ ಲಾಭವನ್ನು ಪಡೆಯುತ್ತಿದ್ದಾರೆ.

ಅನ್ನಭಾಗ್ಯ ಯೋಜನೆಯನ್ನು ಪ್ರಪ್ರಥಮವಾಗಿ ಘೋಷಿಸಿದಾಗ, ಒಂದೆಡೆ ಯೋಜನೆಯ ಅನುಷ್ಠಾನ ಸಾಧ್ಯವೇ ಇಲ್ಲ ಎಂಬುದು ಅಧಿಕಾರಿಗಳ ಅಭಿಪ್ರಾಯವಾಗಿತ್ತು. ಮತ್ತೊಂದೆಡೆ ಅನ್ನಭಾಗ್ಯದ ಫಲಾನುಭವಿಗಳು ಸೋಮಾರಿಗಳಾಗುತ್ತಾರೆ ಎಂಬ ಸೋಗಲಾಡಿತನದ ಹೇಳಿಕೆಗಳೂ ಎಲ್ಲೆಡೆ ಹರಿದಾಡಿದವು.

ಮುಖ್ಯಮಂತ್ರಿಯವರದ್ದು ಖಚಿತ ಧ್ವನಿಯ ಖಡಕ್ ಉತ್ತರ– ‘ಅನ್ನಭಾಗ್ಯ ಯೋಜನೆಯ ವಿರುದ್ಧ ಟೀಕೆ ಮಾಡುತ್ತಿರುವವರೆಲ್ಲರೂ ಹೊಟ್ಟೆ ತುಂಬಿದವರು. ಹಸಿವು ಎಂದರೆ ಏನು ಎಂದು ಗೊತ್ತಿಲ್ಲದವರು. ಹಸಿವಿನಿಂದ ಬಳಲುತ್ತಿರುವ ಅನ್ನಭಾಗ್ಯ ಫಲಾನುಭವಿಗಳು ತಮ್ಮ ಸಂಕಟವನ್ನು ತೋಡಿಕೊಳ್ಳಲೂ ಧ್ವನಿ ಇಲ್ಲದ ಅಸಹಾಯಕರು !’

ಟೀಕಿಸುವವರಿಗೆ ಬಡತನದ ಬಗ್ಗೆ ಏನು ಗೊತ್ತು? ಕೇರಳದಲ್ಲಿ ಬಡವರ ಸಂಖ್ಯೆ ಶೇಕಡಾ ೧೨, ತಮಿಳುನಾಡಿನಲ್ಲಿ ಶೇಕಡಾ ೧೭,